ಅಧ್ಯಕ್ಷರು:- ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ. ಪ್ರಶ್ನೋತ್ತರ ಕಾಲದಲ್ಲಿ ಒಂದು ಗಂಟೆಯಲ್ಲಿ ೨೦ ಪ್ರಶ್ನೆಗಳಿಗೆ ಉತ್ತರ ಆಗಬೇಕು. ತಾವು ಉತ್ತರವನ್ನು ಪುನಃ ಓದಿ ಉಪಪ್ರಶ್ನೆಗಳನ್ನು ಕೇಳುವುದಕ್ಕಿಂತ ತಾವು ತಯಾರು ಮಾಡಿ ಇಟ್ಟುಕೊಂಡು ಪ್ರಶ್ನೆ ಕೇಳಿದರೆ ಸ್ವಲ್ಪದರಲ್ಲೇ ಎಲ್ಲರಿಗೂ ಸಮಾನ ಅವಕಾಶ ಸಿಗುತ್ತದೆ. ತಾವುಗಳು ಒಂದೇ ಪ್ರಶ್ನೆಗೆ ೧೦ ನಿಮಿಷ ತೆಗೆದುಕೊಂಡರೆ ಬೇರೆ ಯಾವ ಪ್ರಶ್ನೆಗಳಿಗೂ ಅನುಕೂಲವಾಗುವುದಿಲ್ಲ. ಅದಕ್ಕೆ ತಾವು ಏನು ಕೇಳಬೇಕೋ ಅದನ್ನು ಅರ್ಥಗರ್ಭಿತವಾಗಿ ಸ್ವಲ್ಪದರಲ್ಲಿಯೇ ಕೇಳಿದರೆ ಸರ್ಕಾರ ಅದಕ್ಕೆ ಸರಿಯಾದ ಉತ್ತರ ಕೊಡುತ್ತದೆ ಮತ್ತು ಎಲ್ಲರಿಗೂ ಸಮಾಧಾನಕರವಾದ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ತಮ್ಮ ಸಲಹೆ ಸರಿಯಾಗಿದೆ. ನಾಳೆಯಿಂದ ಆ ಕೆಲಸ ಮಾಡೋಣ. ದಯವಿಟ್ಟು ಇವತ್ತು ಅವಕಾಶ ಕೊಡಿ.

(ಗೊಂದಲ)

ಶ್ರೀ ಎಸ್.ಹೆಚ್. ಕೌಜಲಗಿ:- ಮಾನ್ಯ ಅಧ್ಯಕ್ಷರೇ, ತಾವು ಅವಕಾಶ ಮಾಡಿ ಕೊಡಬೇಕು. ನನ್ನ ಪ್ರಶ್ನೆ ಬಹಳ ಪ್ರಾಮುಖ್ಯವಾಗಿದೆ. ತಾವು ಅವಕಾಶ ಕೊಡಬೇಕು.

(ಗೊಂದಲ)

<u>//ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.</u>

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಮೊದಲನೆಯ ಪಟ್ಟಿಯಲ್ಲಿರುವ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿಷಯ:- ಸಾರಿಗೆ ಇಲಾಖೆಯ ನಷ್ಟದ ಮೊತ್ತ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧:- (೧)
ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):-
ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಇಲಾಖೆಯಲ್ಲಿ (ಕೆ.ಎಸ್.ಆರ್.ಟಿ.ಸಿ) ೧೯೮೯-೯೦, ೧೯೯೦-೯೧, ೧೯೯೧-೯೨ನೇ ಡಿಸೆಂಬರ್ ಅಖ್ಯೆರುವರೆಗೆ ಆಗಿರುವ ನಷ್ಟವೆಷ್ಟು? (ವರ್ಷವಾರು ವಿವರ ನೀಡುವುದು)
ಆ) ಆ ರೀತಿ ನಷ್ಟಕ್ಕೆ ಕಾರಣಗಳೇನು?
ಇ) ಅಲ್ಲಿ ಅವ್ಯವಹಾರಗಳೇನಾದರೂ ಬೆಳಕಿಗೆ ಬಂದಿದೆಯೇ?
ಈ) ಬಂದಿದ್ದಲ್ಲಿ, ಅಂತಹ ಯಾವುದೇ ಅವ್ಯವಹಾರದ ಬಗ್ಗೆ ಕ್ರಮ ತೆಗೆದುಕೊಳ್ಳಲಾಗಿದೆಯೇ?
ಉ) ಅಲ್ಲಿನ ಅಪಾರವಾದ ಸೋರಿಕೆಯನ್ನು, ನಷ್ಟವನ್ನು ನಿಲ್ಲಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಭೀಮಣ್ಣ ಖಂಡ್ರೆ
(ಸಾರಿಗೆ ಸಚಿವರು)

೧೯೯೦-೯೧ನೇ ಸಾಲಿನಲ್ಲಿ ಗಳಿಸಿದ ಅಲ್ಪ ಪ್ರಮಾಣದ ಲಾಭವನ್ನು ಬಿಟ್ಟರೆ, ೧೯೮೯-೯೦ ಮತ್ತು ೧೯೯೧-೯೨ನೇ ಸಾಲಿನಲ್ಲಿ ಸಂಸ್ಥೆಯು ನಷ್ಟವನ್ನು ಅನುಭವಿಸಿತು. ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಸಾಲು	ಮೊತ್ತ (ಮೊಬಲಗು ಲಕ್ಷ ರೂ.ಗಳಲ್ಲಿ) ಲಾಭ ( )	ನಷ್ಟ (-)
೧೯೮೯-೯೦	-	೩೭೭೦.೧೨
೧೯೯೦-೯೧	೧೩೦.೪೪	-
೧೯೯೧-೯೨	-	೧೯೦೯.೪೫

ನಷ್ಟಕ್ಕೆ ಸಂಬಂಧಪಟ್ಟ ಹಲವು ಪ್ರಮುಖ ಕಾರಣಗಳು ಈ ಕೆಳಂಡಂತೆ ಇರುತ್ತದೆ:

೧) ಸರ್ಕಾರದ ಆದೇಶದ ಮೇರೆಗೆ ವಿದ್ಯಾರ್ಥಿಗಳನ್ನೊಳಗೊಂಡಂತೆ ವಿವಿಧ ಪ್ರಯಾಣಿಕರಿಗೆ, ರಿಯಾಯಿತಿ ದರದ ಪ್ರಯಾಣ ಸೌಲಭ್ಯವನ್ನು ಕಲ್ಪಿಸಿರುವುದರ ಬಾಬ್ತಿನಿಂದ ಸಾರಿಗೆ ಆದಾಯ ಬಾಬ್ತಿನಲ್ಲಿ ಸಂಭವಿಸುತ್ತಿರುವ ೭೮.೦೦ ಕೋಟಿ ರೂ.ಗಳ ವಾರ್ಷಿಕ ಕಡಿತ.

೨) ಖಾಸಗಿ ವಾಹನಗಳಿಗೆ ನಿಗಧಿಪಡಿಸಿರುವುದಕ್ಕಿಂತ ಹೆಚ್ಚಿನ ವಾಹನ ತೆರಿಗೆಯನ್ನು ಸಾರಿಗೆ ಸಂಸ್ಥೆಗೆ ನಿಗಧಿಪಡಿಸಲಾಗಿದೆ. ನಗರ ಸಾರಿಗೆಗೆ ನಿಗಧಿಪಡಿಸಿರುವ ಮೋಟಾರುವಾಹನ ತೆರಿಗೆಯು ಇತರೆ ರಾಜ್ಯಗಳ ನಗರ ಸಾರಿಗೆಗಳಿಗೆ ನಿಗಧಿಪಡಿಸಿರುವುದಕ್ಕಿಂತಲೂ ಅಧಿಕವಾಗಿದೆ. ಈ ಬಾಬ್ತಿನಿಂದ ಸಂಸ್ಥೆಗೆ ವಾರ್ಷಿಕ ೨೪.೦೦ ಕೋಟಿ ರೂ.ಗಳವರೆಗೆ ಅಧಿಕ ಹೊರೆಯಾಗುತ್ತದೆ.

೩) ಇಂಧನ, ಟೈರುಗಳು ಮತ್ತು ಟ್ಯೂಬುಗಳು, ಬಿಡಿಭಾಗಗಳು ಮುಂತಾದ ಸಾಮಗ್ರಿಗಳ ಬೆಲೆಗಳಲ್ಲಿ ಕಾಲಕಾಲಕ್ಕೆ ಆಗಿರುವ ಹೆಚ್ಚಳ.

೪) ಕಾಲಕಾಲಕ್ಕೆ ರಾಜ್ಯ ಸರ್ಕಾರವು ಬಿಡುಗಡೆ ಮಾಡಿದ ರೀತ್ಯ ಸಂಸ್ಥೆಯ ನೌಕರರಿಗೂ ನೀಡುತ್ತಿರುವ ತುಟ್ಟಿಭತ್ಯದ ಕಂತುಗಳು.

೫) ಕಾರ್ಮಿಕ ಒಕ್ಕೂಟ ಒಡಂಬಡಿಕೆಯ ಮೇರೆಗೆ ಕಾಲ ಕಾಲಕ್ಕೆ ಸಂಭವಿಸಿರುವ ಸಿಬ್ಬಂದಿ ವೇತನ ಪರಿಷ್ಕರಣ.

೬) ಸಂಸ್ಥೆಯು ಸತತವಾಗಿ ನಷ್ಟವನ್ನು ಅನುಭವಿಸುತ್ತಲಿರುವುದರಿಂದ ತನ್ನದೇ ಆದ ಆಂತರಿಕ ಸಂಪನ್ಮೂಲಗಳನ್ನು ಹೊಂದದೇ ಹೋದ ಪರಿಣಾಮಕಾರಿಯಾಗಿ ಸಾಲಿಯಾನ ಶೇ.೧೪ರಿಂದ ಶೇ೧೪ರವರೆಗೆ ಬಡ್ಡಿಯ ದರದ ಮೇಲೆ ವಿವಿಧ ವಾಣಿಜ್ಯ ಬ್ಯಾಂಕುಗಳು, ಸ. ಸಂಸ್ಥೆಗಳಿಂದ ಪಡೆದ ಸಾಲದ ಮೇಲೆ ತೆರಬೇಕಾದ ಹೆಚ್ಚುವರಿ ಬಡ್ಡಿ.

೭) ಲಾಭದಾಯಕವಾಗಿರಲಿ ಅಥವಾ ಇಲ್ಲದಿರಲಿ ಗಣನೆಗೆ ತೆಗೆದುಕೊಳ್ಳದೆ ಗ್ರಾಮಾಂತರ ಪ್ರದೇಶಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿರುವುದು.

೮) ಇಂಧನ, ಟೈರುಗಳು, ಟ್ಯೂಬುಗಳು ಮತ್ತು ಬಿಡಿ ಭಾಗಗಳ ಬೆಲೆಗಳಲ್ಲಿ ಹೆಚ್ಚಳ ಉಂಟಾದಾಗಲೆಲ್ಲಾ ಪ್ರಯಾಣ ದರವನ್ನು ಪರಿಷ್ಕರಿಸಲು ಆಗದಿರುವ ಅಸಾಮರ್ಥ್ಯತೆ. ಹೌದು.

ನೌಕರರು ಅವ್ಯವಹಾರಗಳಲ್ಲಿ ತೊಡಗಿರತಕ್ಕಂತಹ ಪ್ರಕರಣಗಳಲ್ಲಿ ಅಂಧವರ ಮೇಲೆ ನಡತೆ ಮತ್ತು ಶಿಸ್ತು ನಿಯಮಾವಳಿ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

೧) ಸಿಬ್ಬಂದಿಯ ಕಾರ್ಯವ್ಯವಸ್ಥೆ ಉತ್ತಮಪಡಿಸುವುದು.
೨) ಮಾರ್ಗ ತನಿಖೆ ಹೆಚ್ಚಿಸುವುದು.
೩) ವಾಹನದ ಉತ್ತಮ ಬಳಕೆ.
೪) ಇಂಧನ ಮತ್ತು ಟೈರುಗಳ ಬೆಲೆ ಇಳಿಸಲು ಒಂದು ಸೂತ್ರವನ್ನು ಸಿದ್ಧಪಡಿಸುವುದು ಮತ್ತು ಪಾಲಿಸುವುದು.
೫) ಬಸ್ ಸಿಬ್ಬಂದಿಯ ಪ್ರಯಾಣ ಇಳಿಸುವುದು.

ವಿಷಯ:- ಬಯಲುನಾಡು ಅಭಿವೃದ್ಧಿ ಮಂಡಲಿ ರಚನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೨:- (೧೬)
ಶ್ರೀ ಎ.ವಿ. ಉಮಾಪತಿ (ಹೊಳಲ್‌ಕೆರೆ)
ಮಾನ್ಯ ಯೋಜನೆ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ರಾಜ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಮಲೆನಾಡು ಅಭಿವೃದ್ಧಿ ಮಂಡಳಿ ಮತ್ತು ಹೈದರಾಬಾದ್ ಅಭಿವೃದ್ಧಿ ಮಂಡಳಿ ರಚಿಸಿ ಆ ಪ್ರದೇಶಗಳನ್ನು ಅಭಿವೃದ್ಧಿಪಡಿಸುತ್ತಿದ್ದು, ದೇಶದ ಬಯಲು ನಾಡುಗಳನ್ನು ನಿರ್ಲಕ್ಷಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?
ಆ) ಬಯಲು ನಾಡುಗಳಾದ ಚಿತ್ರದುರ್ಗ, ತುಮಕೂರು, ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಬಗ್ಗೆ ಮಲತಾಯಿ ಧೋರಣೆ ಅನುಸರಿಸುತ್ತಿರುವುದರಿಂದ ಆ ಜಿಲ್ಲೆಗಳ ಅಭಿವೃದ್ಧಿಯು ಕುಂಠಿತಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?
ಇ) ಆದ್ದರಿಂದ ಈಗಲಾದರೂ ಸರ್ಕಾರವು ಸದರಿ ಜಿಲ್ಲೆಗಳನ್ನು ಸೇರಿಸಿ ಬಯಲು ನಾಡು ಅಭಿವೃದ್ಧಿ ಮಂಡಳಿಗಳನ್ನು ರಚಿಸಿ ಬಯಲು ಸೀಮೆಗಳ ಅಭಿವೃದ್ಧಿಗೆ ಗಮನಹರಿಸುವುದೇ?

ಶ್ರೀ ಟಿ.ಎಂ. ಮಂಜುನಾಥ್
(ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ರಾಜ್ಯ ಮಂತ್ರಿಗಳು)

ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಗುಲ್ಬರ್ಗಾ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ, ಶಿವಮೊಗ್ಗ ಇವುಗಳು ಅಸ್ತಿತ್ವಕ್ಕೆ ಬಂದಿವೆ. ಯಾವುದೇ ಹೆಚ್ಚಿನ ಪ್ರದೇಶಾಭಿವೃದ್ಧಿ ಮಂಡಳಿಗಳ ರಚನೆಯ ಬಗ್ಗೆ ವಿಚಾರಿಸುವುದಕ್ಕಿಂತ ಮೊದಲು ಈಗಾಗಲೇ ಸ್ಥಾಪಿತವಾಗಿರುವ ಪ್ರದೇಶಾಭಿವೃದ್ಧಿ ಮಂಡಳಿಗಳ ಕಾರ್ಯವೈಖರಿಯನ್ನು ವೀಕ್ಷಿಸುವುದು ಸೂಕ್ತ.

ವಿಷಯ:- ಮಲೆನಾಡು ಅಭಿವೃದ್ಧಿ ಯೋಜನೆಯಡಿಯಲ್ಲಿ ಒದಗಿಸಿರುವ ಹಣ.

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ ೩:- (೬೬)
ಶ್ರೀ ಬಿ. ಶಿವರಾಮು (ಗಂಡಸಿ)
ಪರಿಸರ ಮತ್ತು ಜೀವ ಪರಿಸರಶಾಸ್ತ್ರ ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಾನ್ಯ ರಾಜ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?